# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ (ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆ 5048/2022

ಪಿರ್ಯಾದುದಾರ : ಕೆ. ಆರ್. ಸಾಗರ ಪೊಲೀಸ್ ಠಾಣೆ.

ವಿರುದ್ಧ

ಆರೋಪಿ ಲಕ್ಷ್ಮಿ ಕೋಂ ಸುನಿಲ್,
29 ವರ್ಷ,
ವಾಸಃ ಬೆಲವತ್ತ ಮಂಟಿ ಗ್ರಾಮ,
ಮೈಸೂರು.
(ಹಾಲಿ ನ್ಯಾಯಾಂಗ ಬಂಧನ)

## ದೋಷಾರೋಪಣೆ

ಶ್ರೀ ಗೋಪಾಲಕೃಷ್ಣ ರೈ ಟಿ. ಬಿ.ಎ. ಎಲ್.ಎಲ್.ಬಿ. ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮಂಡ್ಯ (ಆಸೀನ ಶ್ರೀರಂಗಪಟ್ಟಣ) ರವರಾದ ನಾನು ಆರೋಪಿಯಾದ ನಿನ್ನ ವಿರುದ್ದ ಈ ಕೆಳಗಿನಂತೆ ದೋಷಾರೋಪಣೆಯನ್ನು ರಚಿಸುತ್ತಿದ್ದೇನೆ.

ಮೊದಲನೆಯದಾಗಿ, ಈ ಪ್ರಕರಣದಲ್ಲಿ ಆರೋಪಿಯಾದ ನೀನು ದಿಃ 05.02.2022 ಕ್ಕೆ ಒಂದು ವರ್ಷದ ಹಿಂದಿನಿಂದಲೂ ಚಾ ಸಾ 2 ಗಂಗಾರಾಮ್ ರವರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದು, ಚಾ ಸಾ 2 ರವರು

ತನ್ನ ಹೆಂಡತಿ ಲಕ್ಷ್ಮೀ ಮತ್ತು ಮಕ್ಕಳಾದ ರಾಜು, ಕೋಮಲ ಮತ್ತು ಕುನಾಲ್ ರವರನ್ನು ಬಿಟ್ಟು ನಿನ್ನ ಜೊತೆ ಬರುವಂತೆ ಹಲವಾರು ಬಾರಿ ಬಲವಂತ ಮಾಡುತ್ತಿದ್ದು, ಅದಕ್ಕೆ ಚಾ ಸಾ 2 ರವರು ತಾನು ತನ್ನ ಹೆಂಡತಿ - ಮಕ್ಕಳಿಗೆ ಮೋಸ ಮಾಡುವುದಿಲ್ಲವೆಂದು ಹೇಳಿದ್ದು, ಅದಕ್ಕಾಗಿ ನೀನು ಚಾ ಸಾ 2 ಮತ್ತು ಆತನ ಹೆಂಡತಿ ಲಕ್ಷ್ಮಿಯ ಮದ್ಯೆ ಭಿನ್ನಾಭಿಪ್ರಾಯ ಬರುವಂತೆ ಹಲವು ರೀತಿಯ ಪ್ರಯತ್ನಗಳನ್ನು ಮಾಡಿದ್ದು, ಅದರಲ್ಲಿ ನೀನು ಸಫಲಳಾಗದೆ ಇದ್ದಾಗ ಮತ್ತು ಲಕ್ಷ್ಮಿಗೆ ನಿನ್ನ ಮತ್ತು ಚಾ ಸಾ 2 ರವರ ನಡುವಿನ ಅಕ್ರಮ ಸಂಬಂಧ ಗೊತ್ತಾಗಿ, ಆಕೆ ಫೋನ್ ಮೂಲಕ ನಿನ್ನನು ಉದ್ದೇಶಿಸಿ ನಿಮ್ಮ ಜೊತೆ ಮಾತನಾಡಬೇಕು ಮನೆಗೆ ಬನ್ನಿ ಇಲ್ಲ ಅಂದರೆ ನಿಮ್ಮಗಳ ಸಂಬಂಧ ವಿಚಾರವನ್ನು ಸಂಬಂಧಿಕರಿಗೆ ತಿಳಿಸುವುದಾಗಿ ಹೇಳಿದ್ದರಿಂದ ಲಕ್ಷ್ಮಿಯನ್ನು ಹೀಗೆ ಬಿಟ್ಟರೆ ನಿನ್ನ ಹಾಗು ಚಾ ಸಾ 2 ರವರ ಸಂಬಂಧದ ಬಗ್ಗೆ ಎಲ್ಲರಿಗೂ ಹೇಳಿ ನಿನ್ನನ್ನುಶಾಶ್ವತವಾಗಿ ಗಂಗಾರಾಮನಿಂದ ದೂರ ಮಾಡಿಬಿಡುತ್ತಾಳೆ ಎಂಬ ಕಾರಣಕ್ಕೆ ಲಕ್ಷ್ಮಿಯನ್ನು ಕೊಲೆ ಮಾಡಲು ತೀರ್ಮಾನಿಸಿ ಅದಕ್ಕಾಗಿ ನಿನ್ನ ಪರಿಚಯ ಇರುವ ಬೆಲವತ್ತ ಗ್ರಾಮದ ಚಿಕನ್ ಅಂಗಡಿಯ ಮನು ಎನ್ನುವವರಿಂದ ಊರಿನಲ್ಲಿ ಜಾತ್ರೆ ಇದೆ ಮಟನ್ ಕತ್ತರಿಸಲು ಮಚ್ಚು ಬೇಕು ಎಂದು ಸುಳ್ಳು ಹೇಳಿ ಆತನಿಂದ ಮಚ್ಚನ್ನು ಪಡೆದು, ಅದರೊಂದಿಗೆ ನಿನ್ನ ಬಳಿ ಇದ್ದ ಒಂದು ಸುತ್ತಿಗೆಯನ್ನು ತೆಗೆದುಕೊಂಡು ಎರಡನ್ನು ಒಂದು ವೇಲ್ ನಿಂದ ಸುತ್ತಿಕೊಂಡು ಒಂದು ಬ್ಯಾಗ್ ನಲ್ಲಿ ಹಾಕಿಕೊಂಡು ದಿಃ 05.02.2022 ರಂದು ಸಂಜೆ ಬೆಲವತ್ತ ಗ್ರಾಮದಿಂದ

ಹೊರಟು ರಾತ್ರಿ 8 ಗಂಟೆಗೆ ಕೆ.ಆರ್. ಸಾಗರದ ಅರಳಿ ಕಟ್ಟೆಯನ್ನು ತಲುಪಿ, ರಾತ್ರಿ ಸುಮಾರು 9-15 ಗಂಟೆಗೆ ಲಕ್ಷ್ಮಿಯ ಮನೆಗೆ ಬಂದಿದ್ದು, ಬಾಗಿಲು ತೆಗೆದ ಲಕ್ಷ್ಮಿಯು ತನ್ನ ಗಂಡ ಚಾ ಸಾ 2 ರವರೊಂದಿಗೆ ನೀನು ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಬಗ್ಗೆ ನಿನ್ನೊಂದಿಗೆ ಜಗಳ ಮಾಡಿ ವಿಷಯವನ್ನು ಸಂಬಂಧಿಕರಿಗೆ ತಿಳಿಸುವುದಾಗಿ ಹೇಳಿದಾಗ ಆರೋಪಿಯಾದ ನೀನು ಇನ್ನು ಮುಂದೆ ಈ ರೀತಿ ಮಾಡುವುದಿಲ್ಲವೆಂದು ಮೃತಳಿಗೆ ಸಮಾಧಾನ ಮಾಡಿದ್ದು, ನಂತರ ರಾತ್ರಿ ಎಲ್ಲರೂ ಮಲಗಿದ್ದಾಗ ಮನೆಯಿಂದ ಹೊರಬಂದು ನೀನು ತಂದಿದ್ದ ಸುತ್ತಿಗೆ ಮತ್ತು ಮಚ್ಚನ್ನು ತೆಗೆದುಕೊಂಡು ಮನೆಯ ಒಳಗೆ ಹೋಗಿ ಮಲಗಿದ್ದ ಲಕ್ಷ್ಮಿಯ ಹಣೆಗೆ ಸುತ್ತಿಗೆಯಿಂದ ಜೋರಾಗಿ ಹೊಡೆದು ಕೊಲೆ ಮಾಡಿ, ಅಲ್ಲಿಯೇ ಇದ್ದ ಬೆಡ್ ಶೀಟ್ ನಿಂದ ಲಕ್ಷ್ಮಿಯ ಮುಖವನ್ನು ಮುಚ್ಚಿ ಹಿಡಿದುಕೊಂಡಿದ್ದು, ಲಕ್ಷ್ಮಿ ಕೂಗಿಕೊಂಡ ಶಬ್ದ ಕೇಳಿ ರೂಂ ನಲ್ಲಿ ಮಲಗಿದ್ದ ಚಾ ಸಾ 3 ರವರ ಮಗ ಗೋವಿಂದ ಎದ್ದು ಬಂದು ಏನಾಯಿತು ಎಂದು ನಿನ್ನನ್ನು ವಿಚಾರಿಸಿದಾಗ ಆರೋಪಿಯಾದ ನೀನು ಸದರಿ ಗೋವಿಂದ ವಿಚಾರವನ್ನು ಎಲ್ಲರಿಗೂ ತಿಳಿಸಿಬಿಡುತ್ತಾನೆ ಎಂದು, ನಂತರ ನೀನು ಸಿಕ್ಕಿಹಾಕಿಕೊಳ್ಳುತ್ತೀಯಾ ಎಂದು ಆತನಿಗೂ ಸಹ ತಂದಿದ್ದ ಸುತ್ತಿಗೆ ಮತ್ತು ಮಚ್ಚಿನಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದು, ನಂತರ ರೂಂ ನಲ್ಲಿ ಮಲಗಿದ್ದ ಲಕ್ಷ್ಮಿಯ ಮಕ್ಕಳಾದ ರಾಜು, ಕೋಮಲ ಮತ್ತು ಕುನಾಲ್ ರವರು ಒಬ್ಬರಾದ ನಂತರ ಒಬ್ಬರಂತೆ ಹೊರ ಬಂದಾಗ ಅವರುಗಳಿಗೂ ಸುತ್ತಿಗೆ ಮತ್ತು ಮಚ್ಚಿನಿಂದ ತಲೆಗೆ ಮತ್ತು ಮುಖಕ್ಕೆ

ಹೊಡೆದು ಕೊಲೆ ಮಾಡಿರುತ್ತೀಯಾ ಈ ಕಾರಣಕ್ಕಾಗಿ ಆರೋಪಿಯಾದ ನೀನು ಭಾರತ ದಂಡ ಸಂಹಿತೆ ಕಲಂ 302 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವಿರಿ.

2. ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಲಕ್ಷ್ಮಿ, ಆಕೆಯ ಮಕ್ಕಳಾದ ರಾಜು, ಕೋಮಲ, ಕುನಾಲ್ ಮತ್ತು ಗೋವಿಂದನನ್ನು ಕೊಲೆ ಮಾಡಿ ನಂತರ ಅವರುಗಳ ಮೇಲೆ ಬ್ಲಾಂಕೆಟ್ ಹೊದಿಸಿ ಕಾಣದಂತೆ ಮಚ್ಚಿನಿಂದ ಯಾರೋ ಸದರಿಯವರುಗಳನ್ನು ಕೊಲೆ ಮಾಡಿ ಕಳವು ಮಾಡಿಕೊಂಡು ಹೋಗಿರುತ್ತಾರೆ ಎಂದು ಜನರಿಗೆ ಅನುಮಾನ ಬರಲಿ ಎಂದು ರೂಂ ನಲ್ಲಿದ್ದ ಬೀರುವಿನ ಬಾಗಿಲನ್ನು ತೆಗೆದು ಅದರಲ್ಲಿದ್ದ ಬಟ್ಟೆ ಮತ್ತು ವಸ್ತುಗಳನ್ನು ಚಲ್ಲಾಪಿಲ್ಲಿ ಮಾಡಿ ನೀನು ಎಸಗಿರುವ ಕೃತ್ಯವನ್ನು ಮರೆಮಾಚಲು ಯತ್ನಿಸಿ ಕೈ ಕಾಲುಗಳನ್ನು ತೊಳೆದುಕೊಂಡು ಮಚ್ಚು ಮತ್ತು ಸುತ್ತಿಗೆಯನ್ನು ಒಂದು ಬಟ್ಟೆಯಲ್ಲಿ ಒರೆಸಿಕೊಂಡು ಲಕ್ಷ್ಮಿಯ ಮನೆಯಿಂದ ಹೊರಟು ನಿನ್ನ ಮನೆಗೆ ಹೋಗಿ ಕೃತ್ಯವೆಸಗಿದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಬದಲಿಸಿ ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಒಂದು ಚೀಲದಲ್ಲಿ ಹಾಕಿಕೊಂಡು ಬೆಲವತ್ತ ಮಂಟಿಯಲ್ಲಿರುವ ವರುಣಾ ಕಾಲುವೆಗೆ ಬಿಸಾಡಿ, ಮಚ್ಚನ್ನು ತೊಳೆದು ಚಿಕನ್ ಅಂಗಡಿಯ ಮನುವಿಗೆ ವಾಪಸ್ಸು ನೀಡಿದ್ದು ಆ ಮೂಲಕ ಆರೋಪಿಯಾದ ನೀನು ಕೃತ್ಯಕ್ಕೆ ಸಂಬಂಧಿಸಿದ ಸಾಕ್ಷಿಯನ್ನು

8/27/3

ನಾಶಪಡಿಸಲು ಪ್ರಯತ್ನಪಟ್ಟಿರುವುದರಿಂದ ಭಾರತ ದಂಡ ಸಂಹಿತೆ ಕಲಂ 201 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವಿರಿ.

ಆರೋಪಿಯಾದ ನೀನು ಈ ಮೇಲಿನ ದೋಷಾರೋಪಣೆಯ ಬಗ್ಗೆ ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತಿದ್ದೇನೆ.

(ಗೋಪಾಲಕೃಷ್ಣ ರೈ ಟಿ.)
ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

27/7/12